ಸಿಸಿ ಸಂಃ **264/2024**

ಸಿ ಡಬ್ಲ್ಯೂಃ **1**
ಪಿ ಡಬ್ಲ್ಯೂಃ **1**

**ದಿನಾಂಕಃ 23.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ಸಾಕ್ಷಿಯ ಹೆಸರು ಃ ಗವಿಗೌಡ

ತಂದೆಯ ಹೆಸರು ಃ ಲೇಟ್ ನಿಂಗೇಗೌಡ

ವಯಸ್ಸು ಃ 57 ವರ್ಷ

ಉದ್ಯೋಗ ಃ ವ್ಯವಸಾಯ

ವಾಸ ಸ್ಥಳ ಃ ವಡ್ಡರಹಳ್ಳಿ ಗ್ರಾಮ

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ**

ಸುಮಾರು 2 ವರ್ಷಗಳ ಹಿಂದೆ ನನ್ನ ಹೆಂಡತಿ ಪಾಂಡವಪುರದಿಂದ ಚಿನಕುರಳಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ನಲ್ಲಿ ಹೋಗುತ್ತಿದ್ದರು. ಬಸ್ ಹಿಂಬದಿ ಸೀಟ್ ನಲ್ಲಿ ಕುಳಿತಿದ್ದಾಗ ಬಸ್ ಅನ್ನು ಚಾಲಕರು ಅತಿವೇಗ ಮತ್ತು ನಿರ್ಲಕ್ಷತೆಯಿಂದ ಚಾಲನೆ ಮಾಡಿದ ಕಾರಣ ನನ್ನ ಹೆಂಡತಿಯ ತಲೆಗೆ ಮತ್ತು ಹೊಟ್ಟೆಗೆ ಪೆಟ್ಟಾಗಿರುತ್ತದೆ. ಈ ವಿಷಯವನ್ನು ನನಗೆ ತಿಮ್ಮೇಗೌಡರು ನನಗೆ ಕರೆ ಮಾಡಿ ತಿಳಿಸಿದರು. ಅವರು ನನ್ನ ಹೆಂಡತಿಯನ್ನು ಚಿನಕುರಳಿ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ತಳಿಸಿದರು, ಅದರಂತೆ ನಾನು ಅಲ್ಲಿಗೆ ಹೋಗಿ ವಿಚಾರಿಸಿದಾಗ ನನ್ನ ಹೆಂಡತಿಯ ತಲೆಗೆ ಮತ್ತು ಹೊಟ್ಟೆಯ ಭಾಗಕ್ಕೆ ಪೆಟ್ಟಾಗಿತ್ತು. ಅಲ್ಲಿಂದ ಹೆಚ್ಚುವರಿ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋದೆನು, ಅಲ್ಲಿ ಚಿಕಿತ್ಸೆ ಕೊಡಿಸಿ ಮತ್ತೆ ಮನೆಗೆ ವಾಪಸ್ಸಾಗಿರುತ್ತೇವೆ. ಬಸ್ ನ ಚಾಲಕರೊಂದಿಗೆ ಸಂದಾನ ಮಾಡಿಕೊಳ್ಳಲು ಅವರು ಕರೆದ ಕಾರಣ ಕಾದೆವು, ಅವರು ಯಾವುದೇ ರೀತಿ ಪ್ರತಿಕ್ರಿಯೆ ಕೊಡದೇ ಇದ್ದ ಕಾರಣ ಸುಮಾರು ಒಂದು ವಾರದ ನಂತರ ದೂರನ್ನು ಕೊಟ್ಟೆವು.

2. ನಂತರ ಪೊಲೀಸರು ಹುಲ್ಕೆರೆಯ ಹಂಪ್ಸ್ ಬಳಿ ಸ್ಥಳ ಪರಿಶೀಲನೆ ಮಾಡಿ ದಾಖಲೆ ಬರೆದುಕೊಂಡರು. ಆಗ ಸ್ಥಳದಲ್ಲಿ 1.30 ರಿಂದ 2.30 ರ ವರೆಗೆ ಇದ್ದರು. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಆ ಸಮಯದಲ್ಲಿ ತಿಮ್ಮಯ್ಯ ಮತ್ತು ಮತ್ತೊಬ್ಬರು ಇದ್ದರು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಬಸ್

ಸಂಖ್ಯೆ ಹೇಳಲು ನೆನಪಿಲ್ಲ. ಸಾಕ್ಷಿ ಈಗ ದೂರನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–1** ಎಂದು ಸಾಕ್ಷಿಯವರ ಹೆಬ್ಬೆರಳಿನ ಗುರುತನ್ನು **ನಿಪಿ–1(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಈಗ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ–2** ಎಂದು ಸಾಕ್ಷಿಯವರ ಹೆಬ್ಬೆರಳಿನ ಗುರುತನ್ನು **ನಿಪಿ–2(ಎ)** ಎಂದು ಗುರುತಿಸಲಾಯಿತು. ಸ್ಥಳದಲ್ಲಿ ತೆಗೆದ ಪೋಟೋವನ್ನು **ನಿಪಿ–3** ಎಂದು ಗುರುತಿಸಲಾಯಿತು. ಬಸ್ ನ ಮುರು ಪೋಟೋಗಳನ್ನು ಒಟ್ಟಾರೆ **ನಿಪಿ–4** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ವಿಚಾರಿಸಬೇಕಾಗಿ ಎಪಿಪಿರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಬೇಕಾಗಿ ನ್ಯಾಯಾಲಯದಲ್ಲಿ ವಿನಂತಿಸಿದ ಮೇರೆಗೆ ಅನುಮತಿಯನ್ನು ನೀಡಿರುತ್ತದೆ.)**

**ಪಾಟೀ ಸವಾಲುಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ**

ಅಪಘಾತವಾದ ದಿನಾಂಕ 24.10.2023 ರಂದು ಮಧ್ಯಾಹ್ನ 12.30 ಗಂಟೆಗೆ ಬಸ್ ಸಂಖ್ಯೆ ಕೆ.ಎ–11 ಎಫ್.105 ಎಂದರೆ ಸರಿ. ಆರೋಪಿ ಬಸ್ ಅನ್ನು ಅತಿವೇಗವಾಗ ಮತ್ತು ಅಜಾಗರೂಕತೆಯಿಂದ ಹಂಪ್ ಗಳ ಮೇಲೆ ಚಾಲನೆ ಮಾಡಿಕೊಂಡು ಹೋದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತದ ಬಗ್ಗೆ ನನಗೆ ಚಾ.ಸಾ–3 ರವರು ಮಾಹಿತಿ ಕೊಟ್ಟಿರುತ್ತಾರೆ ಮತ್ತು ನನ್ನ ಹೆಂಡತಿಯನ್ನು ಅದೇ ಬಸ್ ನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಚಾ.ಸಾ–3 ರವರು ನನ್ನ ಹೆಂಡತಿಯನ್ನು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು ಎಂದರೆ ಸರಿ. ನಮ್ಮ ಜೊತೆಗೆ ರಾಜೀ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಆರೋಪಿಯು ಸಂದಾನ ಮಾಡದೇ ಇದ್ದ ಕರಣ ದಿಃ 13.11.2023 ರಂದು ದೂರು ಕೊಟ್ಟಿದ್ದೆ ಎಂದರೆ ಸರಿ. ನಂತರ ಅದೇ ದಿನ ಪೊಲೀಸರು ಮದ್ಯಾಹ್ನ 1.30 ರಿಂದ 2.30 ರ ತನಕ ನಿಪಿ–2 ರಂತೆ ಮಹಜರ್ ಅನ್ನು ನನ್ನ ಮತ್ತು ಚಾ.ಸಾ–4 ಮತ್ತು 5 ರವರ ಸಮಕ್ಷಮ ತಯಾರು ಮಾಡಿರುತ್ತಾರೆ ಎಂದರೆ ಸರಿ.

ಸಿಸಿ ಸಂಃ **264/2024** **ಸಿ ಡಬ್ಲ್ಯೂಃ 1**

ಪಿ ಡಬ್ಲ್ಯೂಃ **1**

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಸಮಯವನ್ನು ಕೋರಿದ್ದು, ಯಾವುದೇ ಸಕಾರಣ ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**